**CC 153/2017**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್ 153/2017**

**ಸಿ ಡಬ್ಲ್ಯೂ -5**

**ಪಿ ಡಬ್ಲ್ಯೂ - 5**

**ಸಾಕ್ಷಿಯ ಹೆಸರು -** **ಎಸ್ ಲೋಕೇಶ ಬಾಬು**
**ತಾಯಿಯ ಹೆಸರು -** **ಶಕುಂತಲಮ್ಮ**
**ವಯಸ್ಸು -** **47 ವರ್ಷಗಳು**
**ಉದ್ಯೋಗ -** **ವಕೀಲರು**
**ವಾಸಸ್ಥಳ -** **ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ 21-03-2025 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ಚಾಸಾ **-4** ನನ್ನ ಸ್ನೇಹಿತನಿದ್ದು, ಚಾಸಾ **-1** ರವರು ಅವರ ಹೆಂಡತಿ ಇರುತ್ತಾರೆ. ಆದ್ದರಿಂದ, ಅವರ ಪರಿಚಯ ಇರುತ್ತದೆ.

ಚಾಸಾ **-1** ರವರು ದಿಃ **19-03-2016** ರಿಂದ **06-05-2016** ರವರೆಗೆ ಆರೋಪಿಯ ಹತ್ತಿರ ಹಲ್ಲು ನೋವಿಗೆ ಸಂಬಂಧಿಸಿ ಚಿಕಿತ್ಸೆಯನ್ನು ಪಡೆದಿರುತ್ತಾರೆ. ಚಾಸಾ **-1** ರವರ ಚಿಕಿತ್ಸೆ ಸಮಯದಲ್ಲಿ ಆರೋಪಿ ಉಪಕರಣವೊಂದರ ತುಂಡನ್ನು ಹಲ್ಲಿನಲ್ಲಿ ಬಿಟ್ಟಿದ್ದರಿಂದ ಚಾಸಾ **-1** ರವರು ಅತೀವ ನೋವು ಅನುಭವಿಸಿರುತ್ತಾರೆ. ಹಲ್ಲಿನ ನೋವು ಹೆಚ್ಚಾಗಿದ್ದರಿಂದ ಚಾಸಾ **-1** ರವರು ಧಾರವಾಡದ ಎಸ್ ಡಿ ಎಂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಚಾಸಾ **-1, 4** ಮತ್ತು ನಾನು ಈ ವಿಚಾರವಾಗಿ ಆರೋಪಿಯನ್ನು ಭೇಟಿಯಾಗಲು ಹೋಗಿದ್ದೇವು. ಆರೋಪಿ ಎಷ್ಟೇ ಖರ್ಚಾದರೂ ತಾನೇ ಚಾಸಾ **-1** ರವರಿಗೆ ಚಿಕಿತ್ಸೆಯನ್ನು ಕೊಡಿಸುವುದಾಗಿ ಮಾತು ಕೊಟ್ಟು ನಂತರ ಅದರಂತೆ ನಡೆದುಕೊಳ್ಳಲಿಲ್ಲ.

ನಂತರ ಚಾಸಾ **-1** ರವರು ದೂರು ಕೊಟ್ಟಿರುವುದಾಗಿ ನನಗೆ ತಿಳಿಸಿದರು. ಪೋಲಿಸರು ನನ್ನನ್ನು ಕರೆದು ಹೇಳಿಕೆಯನ್ನು ಪಡೆದಿರುತ್ತಾರೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಸಿ ಪಿ ವಾಯ್., ವಕೀಲರಿಂದಃ**

ನಾನು ಮತ್ತು ಚಾಸಾ -4 ರವರು ಆತ್ಮೀಯರು ಅಂದರೆ ಸರಿ. ನನಗೆ ಪ್ರಕರಣದ ಬಗ್ಗೆ ವೈಯಕ್ತಿಕ ತಿಳುವಳಿಕೆ ಇಲ್ಲ ಅಂದರೆ ಸರಿ. ಸಾಕ್ಷಿ ಮುಂದುವರೆದು ಚಾಸಾ -4 ರವರು ಹೇಳಿದ್ದರಿಂದ ಗೊತ್ತು ಎಂದು ನುಡಿಯುತ್ತಾರೆ. ಪೋಲಿಸರು ನನ್ನ ಹೇಳಿಕೆಯನ್ನು ಪಡೆಯಲು ಲಿಖಿತ ನೋಟಿಸ್ ನ್ನು ನನಗೆ ನೀಡಿರಲಿಲ್ಲ. ದೂರವಾಣಿ ಕರೆ ಮಾಡಿ ಕರೆಸಿದ್ದರು. ಚಾಸಾ -1 ರವರು ನೀಡಿರುವ ದೂರಿನಲ್ಲಿ ನನ್ನ ಹೆಸರು ಬರೆಸಿಲ್ಲ ಅಂದರೆ ನನಗೆ ಗೊತ್ತಿಲ್ಲ. ಚಾಸಾ -4 ರವರು ನನ್ನೊಂದಿಗೆ ಆರೋಪಿಯ ಕ್ಲಿನಿಕ್ ಗೆ ಹೋಗಿದ್ದಾಗಿ ತಿಳಿಸಿದ್ದರಿಂದ ಪೋಲಿಸರು ನನ್ನನ್ನು ಕರೆಸಿದ್ದರು ಅಂದರೆ ನನಗೆ ಗೊತ್ತಿಲ್ಲ. ಆರೋಪಿಯ ಕ್ಲಿನಿಕ್ ಸುತ್ತಮುತ್ತಲು ಅಂಗಡಿ ಮುಗ್ಗಟ್ಟುಗಳು ಇವೆ ಅಂದರೆ ಸರಿ.

ಚಾಸಾ -1 ರವರು ಎಷ್ಟು ಬಾರಿ ದೂರು ನೀಡಿರುತ್ತಾರೆ, ಆ ರೀತಿ ಯಾವಾಗ ದೂರು ನೀಡಿರುತ್ತಾರೆ ಮತ್ತು ಯಾವ ದೂರು ಡಿ ಪಿ ಪ್ರಕರಣ ಎಂದು ದಾಖಲು ಆಗಿತ್ತು ಎಂದು ನನಗೆ ಮಾಹಿತಿ ಇರುವುದಿಲ್ಲ. ಎಸ್ ಡಿ ಎಂ ಆಸ್ಪತ್ರೆಯವರು ನೀಡಿರುವ ವರದಿಯನ್ನು ನಾನು ಓದಿ ನೋಡಿಲ್ಲ. ಚಾಸಾ -4 ರವರು ಎಸ್ ಡಿ ಎಂ ಆಸ್ಪತ್ರೆಯವರು ನೀಡಿರುವ ವರದಿಯ ಬಗ್ಗೆ ನನಗೆ ಮಾಹಿತಿ ನೀಡಿಲ್ಲ ಅಂದರೆ ಸರಿ. ಚಾಸಾ -1 ರವರು ಗ್ರಾಹಕರ ವೇದಿಕೆಯಲ್ಲಿ ಪ್ರಕರಣ ದಾಖಲಿಸಿ ರೂ. 37,000/- ಗಳನ್ನು ಪರಿಹಾರವಾಗಿ ಪಡೆದಿರು ವಿಚಾರ ನನಗೆ ಗೊತ್ತಿಲ್ಲ.

**CC 153/2017**

**ಸಿ ಡಬ್ಲೂ -5**
**ಪಿ ಡಬ್ಲೂ - 5**

ನನಗೆ ಪ್ರಕರಣದ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹ ಚಾಸಾ -4 ನನ್ನ ಸ್ನೇಹಿತ ಎಂಬ ಕಾರಣಕ್ಕೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.